

ಭ್ರಮಾಲೋಕದಲ್ಲಿ ಕಳೆದುಹೋದಳು.

ಮನೆಯ ಹಿತ್ತಲಿನಲ್ಲಿದ್ದ ಸಣ್ಣ ಹೊಂಗೆ ಮರದ ಕೆಳಗೆ ಕುಳಿತಿದ್ದ ಹಿರಿಯಜ್ಜ ಮತ್ತು ಮರಿಮೊಮ್ಮಗಳು ಬಾಲೆ ಇಬ್ಬರೂ ಸುತ್ತಲ ಜಗತ್ತನ್ನೇ ಮರೆತು ತಮ್ಮದೇ ಮಾತುಕತೆಯಲ್ಲಿ ಮುಳುಗಿದ್ದರು. ಸಣ್ಣವಳಿಂದಲೂ ಈ ಮರಿಮೊಮ್ಮಗಳು ಹಿರಿಯಜ್ಜನ ಕೂಸೇ ಆಗಿದ್ದಳು. ಲೆಕ್ಚರರ್ ಆಗಲಿ, ಅವನ ಹೆಂಡತಿ ಆಗಲಿ ತಮ್ಮ ಮಗುವನ್ನು ಎತ್ತಾಡಿಸಿದ್ದು ಕಡಿಮೆಯೇ. ಮಗುವಿನ ಹೊಟ್ಟೆ, ಬಟ್ಟೆ ಸ್ನಾನಾದಿ ಕಾರ್ಯಗಳ ಬಿಟ್ಟರೆ ಹಿರಿಯಜ್ಜನೇ ಅದಕ್ಕೆ ಸರ್ವಸ್ವ. ಶಾಲೆಗೆ ಬಿಟ್ಟು ಬರುವುದಿರಲಿ, ಹೋಂವರ್ಕ್ ಮಾಡಿಸಿ ಓದಿಸುತ್ತಿದ್ದುದೂ ಹಿರಿಯಜ್ಜನೇ. ಅವನು ಪರೀಕ್ಷೆಗಳ ಸಮಯದಲ್ಲಿ ಬಾಲೆಯ ಜೊತೆ ಇದ್ದು ಓದಿನಲ್ಲಿ ಬಾಲೆಯ ವಿಶ್ವಾಸ ಹೆಚ್ಚಿಸುತ್ತಿದ್ದ. ಹಿರಿಯಜ್ಜ ತನ್ನ ಸುದೀರ್ಘ ಜೀವನದ ಹಲವು ಪಾಠಗಳನ್ನು ಆ ಬಾಲೆಗೆ ಅರೆದು ಕುಡಿಸಿದ್ದ.

ಬಾಲೆ ಹಿರಿಯಜ್ಜನ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಾಳೆ. ಅವಳ ಎಳೆಯ ಮನಸ್ಸು ಎಲ್ಲ ಮಾತುಗಳನ್ನೂ ಗ್ರಹಿಸಿ ಹಿಡಿದಿಟ್ಟುಕೊಳ್ಳುತ್ತದೆ. ಹಿರಿಯಜ್ಜನಿಗಿದ್ದ ಸಾಹಿತ್ಯದ ಅಭಿರುಚಿ, ಅನೇಕ ಸಾಹಿತಿಗಳ ಒಡನಾಟ ಬಾಲೆಗೆ ಗೊತ್ತಿತ್ತು. ಅಜ್ಜನಿಗೆ ಕನ್ನಡ ಕಾವ್ಯವೆಂದರೆ ಪಂಚಪ್ರಾಣವಾಗಿತ್ತು. ಅವನು ಎದ್ದರೆ, ಕೂತರೆ ಅನೇಕ ಸಲ ಪದ್ಯಗಳ ಗುನುಗುಟ್ಟುವುದನ್ನು ಕೇಳಿಸಿಕೊಂಡಿದ್ದಳು.

‘ಹಿರಿಯಜ್ಜ ಹಿರಿಯಜ್ಜ ಒಂದು ಪದ್ಯ ಹೇಳು.’

ಶಾಲೆಯಲ್ಲಿ ಕನ್ನಡದ ಮೇಷ್ಟ್ರಷ್ಟೇ ಆಪ್ಯಾಯಮಾನವಾಗಿ ಪದ್ಯ ಹೇಳುತ್ತಾನೆ ಮುತ್ತಜ್ಜ.

**‘ರಾಗಿ ಮುದ್ದೆ ರೊಟ್ಟಿ ಗಂಜಿ**
**ಸೇವಿಸು ನನ್ನ ಅಪರಂಜಿ**
**ಓಡಿವೆ ಕಾಯಿಲೆ ಗಂಜಿಗೆ ಅಂಜಿ**
**ಚಿನ್ನ ತೂಗುವ ಗುಲಗಂಜಿ’**

‘ಆಹಾ! ಅಜ್ಜಾ! ಈ ಬೆಲ್ಲದಂಥ ಪದ್ಯ ಯಾರು ಬರೆದದ್ದು?’ ‘ನಾನೇ ಕಣೇ ಕಟ್ಟಾಣಿ!’ ಬಾಲೆಗೆ ಸಂತೋಷ ಉಕ್ಕುತ್ತದೆ. ‘ಅಜ್ಜಾ! ಅಜ್ಜಾ! ಇನ್ನೊಂದು ಪದ್ಯ ಹೇಳು ನೋಡೋಣ’

**‘ಜೀವಾತ್ಮನ ಪತನಕೆ ಜಂಬಾಡಂಬರ**
**ಅರಳಲು ಸರಳತೆ ಮದ್ದು**
**ಮನುಕುಲ ಮುತ್ತುವ ಕತ್ತಲೆ ತೊಲಗಲಿ**
**ಸರಳತೆ ಬೀಗಲಿ ಗೆದ್ದು’**

ಹೆಚ್ಚು ಸಂತೋಷವಾದಾಗ ಯಾವಾಗಲೂ